# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1200

2 ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು

3 ಉತ್ತರಿಸುವ ದಿನಾಂಕ : 23.12.2021

4 ಉತ್ತರಿಸುವ ಸಚಿವರು : ಗೃಹ ಸಚಿವರು

| ಪ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ಪೊಲೀಸ್ ಇಲಾಖೆಯಲ್ಲಿ ಎಷ್ಟು ಸಿಬ್ಬಂದಿಗಳಿದ್ದಾರೆ; (SP, DYSP, CPI, PSI, HC, PC, DAR & STAFF ಗಳು ಸೇರಿದಂತೆ ವಿವರ ನೀಡುವುದು) | ಬೀದರ್ ಜಿಲ್ಲೆಯ ಪೊಲೀಸ್ ಘಟಕದಲ್ಲಿ ಒಟ್ಟು 1795 ಅಧಿಕಾರಿ/ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಹುದ್ದೆವಾರು ವಿವರವನ್ನು ಅನುಬಂಧ-ಅ ರಲ್ಲಿ ನೀಡಲಾಗಿದೆ. |
| ಆ) | ಸದರಿ ಅಧಿಕಾರಿ ಸಿಬ್ಬಂದಿಗಳಿಗೆ ಅವರಿಗೆ ವಾಸವಾಗಿರಲು ವಸತಿ ಸಮುಚ್ಚಯ (Quarteres) ಇದೆಯೇ; ಇಲ್ಲದಿದ್ದಲ್ಲಿ ನಿರ್ಮಿಸಲು ಯೋಜನೆ ಏನಾದರೂ ಸರ್ಕಾರದ ಮುಂದಿದೆಯೇ; | ಬೀದರ್ ಜಿಲ್ಲೆಯ ಘಟಕದಲ್ಲಿ ಅಧಿಕಾರಿ/ಸಿಬ್ಬಂದಿಗಳಿಗೆ ವಾಸಿಸಲು ವಸತಿ ಸಮುಚ್ಚಯ (Quarter) ಇರುತ್ತದೆ. |
| ಇ) | ಪ್ರಸ್ತುತ ಬೀದರ್ ನಗರದಲ್ಲಿರುವ ವಸತಿಗಳು (Quarters) ಬಹಳ ಶಿಥಿಲಾವಸ್ಥೆಯಲ್ಲಿದ್ದು, ಅವು ಯಾವಾಗಾದರೂ ಬೀಳಬಹುದೆಂಬ ಆತಂಕದಲ್ಲಿ ಸಿಬ್ಬಂದಿಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೀದರ್ ನಗರದಲ್ಲಿ ವಸತಿಗೃಹಗಳು ಶಿಥಿಲಾವಸ್ಥೆಯಲ್ಲಿರವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ಬೀದರ್ ನಗರದಲ್ಲಿ ಶಿಥಿಲಾವಸ್ಥೆಯಲ್ಲಿರುವ 68 ವಸತಿ ಗೃಹಗಳನ್ನು ನೆಲಸಮಗೊಳಿಸಲು ದಿ: 14/8/2018ರಲ್ಲಿ ಅನುಮತಿ ನೀಡಿದ್ದು, ಸದರಿ ವಸತಿ ಗೃಹಗಳನ್ನು ನೆಲಸಮಗೊಳಿಸಲಾಗಿರುತ್ತದೆ. |
| ಈ) | ಬಂದಿದ್ದಲ್ಲಿ, ಈ ಕಟ್ಟಡಗಳನ್ನು ನೆಲಸಮ ಮಾಡಿ ಜಿ+2 ತರಹದ ಕಟ್ಟಡಗಳು ನಿರ್ಮಾಣ ಮಾಡುವ ಯೋಚನೆ ಏನಾದರೂ ಸರ್ಕಾರಕ್ಕಿದೆಯೇ; ಹಾಗಿದಲ್ಲಿ, ಯಾವಾಗ ಮಾಡಲಾಗುವುದು; ಇಲ್ಲವಾದಲ್ಲಿ ಕಾರಣ ನೀಡುವುದು? | ಪೊಲೀಸ್ ಗೃಹ-2025 ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಗೆ 504 ಪೊಲೀಸ್ ಸಿಬ್ಬಂದಿಗಳಿಗೆ ಹಾಗೂ 12 ಅಧಿಕಾರಿಗಳಿಗೆ ಒಟ್ಟು 516 ವಸತಿ ಗೃಹಗಳನ್ನು ನಿರ್ಮಿಸಲು ಪರಿಗಣಿಸಲಾಗಿದೆ.<br>ಪ್ರಸ್ತುತ ಬೀದರ್ ಜಿಲ್ಲೆಯ ಅಬ್ದುಲ್‌ಫೈಜ್ ದರ್ಗಾದಲ್ಲಿ 36 ವಸತಿಗೃಹಗಳು ಮತ್ತು ಹುಮನಾಬಾದ್‌ನಲ್ಲಿ 36 ವಸತಿ ಗೃಹಗಳ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |

ಸಂಖ್ಯೆ: ಒಇ 292 ಪಿಇಜಿ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು